ಆ ದರಿದ್ರದವಳು ಮಂಗಳಾ ಎಲ್ಲಿಗೆ ಹೋದಳು, ನಿನ್ನೆಯಿಂದ ಫೋನ್ ತೆಗೆಯುತ್ತಿಲ್ಲ..."

"ಆಗಲಿಲ್ಲ ಅಂದ್ರೆ ಸೀದಾ ಏರ್‌ಪೋರ್ಟ್‌ಗೆ ಬಾ ಅಂತ ಹೇಳಿದೀನಿ."

ಅನಂತರಾಮಯ್ಯನ ದೃಷ್ಟಿ ಬಾಗಿಲಲ್ಲಿ ನಿಂತಿದ್ದವರ ಮೇಲೆ ಹೋಯಿತು. ಭಯದಿಂದ ಕೈಲಿದ್ದ ಲೋಟ ದೊಡ್ಡ ಸದ್ದು ಮಾಡುತ್ತಾ ಕೆಳಕ್ಕೆ ಬಿತ್ತು. ಬಾಗಿಲಲ್ಲಿ ಮಂಗಳಾ ನಿಂತಿದ್ದಳು. ಅವಳ ಮುಖ ಕಳಾಹೀನವಾಗಿತ್ತು.

ಅವಳ ಹಿಂದೆ ಇನ್‌ಸ್ಪೆಕ್ಟರ್ ಭೂಷಣ್ ಮತ್ತು ಅಮಿತಾ ನಿಂತಿದ್ದರು. ಅವರ ಮುಖದಲ್ಲಿ ಕುಹಕ ನಗೆಯಿತ್ತು.

ಅದೇ ಸಮಯಕ್ಕೆ ಹಂಸಿನಿ ಬಾಗಿಲು ತೆರೆದು ಹೊರಬಂದಳು. ಬಂಗಾರದ ಬಣ್ಣದ ಚೂಡೀದಾರ್, ಅದೇ ಬಣ್ಣದ ಚಪ್ಪಲಿ, ಕೈಯಲ್ಲೊಂದು ಬ್ಯಾಗ್! ತನ್ನ ವೇಲ್ ಸರಿಪಡಿಸಿಕೊಳ್ಳುತ್ತಾ, "ನೋಡು ನಂದು, ಒಂದು ವರ್ಷದಿಂದ ವೀಲ್‌ಚೇರ್ ಮೇಲೆ ಕೂತೂ ಕೂತೂ ಸಾಕಾಗಿದೆ. ಈಗಲೇ ಹೇಳಿದೀನಿ ನೆಕ್ಸ್ಟ್ ಟೈಮ್ ನೀನು ವೀಲ್‌ಚೇರ್ ಮೇಲೆ ಕೂತುಕೊ, ನಾನು ಮದುವೆ ಆಗ್ತೀನಿ. ನಾನೂ ಒಂದೆರಡು ವರ್ಷ ಎಂಜಾಯ್ ಮಾಡ್ತೀನಿ."

ಅವಳ ದೃಷ್ಟಿ ಅಲ್ಲಿದ್ದವರ ಮೇಲೆ ಬಿತ್ತು!

ಇಡೀ ಹಾಲ್ ಮೌನ!

ಎಲ್ಲರ ಮುಖವೂ ಕಳಾಹೀನ!

ಭೂಷಣ್ ಹಾಲ್‌ನ ಮಧ್ಯಭಾಗಕ್ಕೆ ಬಂದು ನಿಂತು ಜೋರಾಗಿ ನಗುತ್ತ, "ನನ್ನ ಸರ್ವೀಸ್‌ನಲ್ಲೇ ಇಷ್ಟು ಕೋಆರ್ಡಿನೇಟ್ ಆಗಿ ಮಾಡಿದ ಕೊಲೆ ನೋಡಿರಲಿಲ್ಲ... ಅಕ್ಕ, ತಂಗಿ, ಕೆಲಸದವಳು, ಸ್ನೇಹಿತ ಹೀಗೆ ಒಬ್ಬೊಬ್ಬರು ಒಂದೊಂದು ಪಾತ್ರ... ಒಬ್ಬಳು ಹ್ಯಾಂಡಿಕ್ಯಾಪ್ ಅಂತ ಸಿಂಪಥಿ ತಗೊಂಡು ಅಮಾಯಕ ಶ್ರೀಮಂತ ವಯಸ್ಕರನ್ನು ಮದುವೆಯಾಗಿ, ಅವರನ್ನು ಕೊಂದು ಅವರ ಆಸ್ತಿ ಕಬಳಿಸೋದು. ಇದೇ ನಿಮ್ಮ ಆಟ ಅಲ್ವಾ... ಇವತ್ತಿಗೆ ನಿಮ್ಮ ನಾಟಕ ಮುಗೀತು. ಈಗ ನೀವೆಲ್ಲಾ ಪೊಲೀಸರ ಅತಿಥಿಗಳು. ಒಬ್ಬೊಬ್ಬರ ಮೇಲೆ ಒಂದೊಂದು ಚಾರ್ಜ್. ಕೊಲೆ ಯಾರು ಹೇಗೆ ಮಾಡಿದ್ದು ಅಂತ ನೀವೇ ಹೇಳ್ತೀರೋ ಅಥವಾ ಪೊಲೀಸ್ ಬೆತ್ತದ ರುಚಿ ನೋಡಿ ಹೇಳ್ತೀರೋ?"

ಅನಂತರಾಮಯ್ಯ ಸಾವರಿಸಿಕೊಂಡು, "ನೀವು ಏನಾದರೂ ಚಾರ್ಜಸ್ ಹಾಕಿ... ನಾವು ಏನನ್ನೂ ಒಪ್ಪಲ್ಲ. ಬೇಕಾದರೆ ಕೋರ್ಟ್‌ನಲ್ಲಿ ಕೇಸ್ ಹಾಕಿ, ಅಷ್ಟೇ. ಹೀಗೆ ಹೆದರಿಸಿ ಬೆದರಿಸಿದ್ರೆ ಒಪ್ಪಲ್ಲ. ನಂದಿನಿನೆ ಕೊಲೆ ಮಾಡಿದಾಳೆ ಅನ್ನಕ್ಕೆ ಸಾಕ್ಷಿ ಇಲ್ಲ. ಅವಳ ಕೋರ್ಟ್ ಹೇಳಿಕೆಗೂ ಅಕ್ಯುಯಲ್ ಆಗಿರೋ ಕೊಲೆಗೂ ಸಂಬಂಧ ಇಲ್ಲ. ಇನ್ನು ಹಂಸಿನಿ, ಅವಳ ಮೇಲೆ ಏನು ಕೇಸ್ ಹಾಕ್ತೀರಾ? ನಥಿಂಗ್! ನಾನು ಮತ್ತು ಮಂಗಳಾ ಕ್ರೈಂ ಸೀನ್‌ನಲ್ಲೇ ಇರಲಿಲ್ಲ. ಅದೇನು ಮಾಡ್ಕೊತೀರೋ ಮಾಡ್ಕೊಳ್ಳಿ... ನಾನೂ ನೋಡ್ಕೋತೀನಿ..."

ಭೂಷಣ್ ಒಂದು ಕ್ಷಣ ತಬ್ಬಿಬ್ಬಾದ...

'ಪೊಲೀಸರಿಗಿಂತ ಕೊಲೆಗಾರಾರೇ ಬುದ್ಧಿವಂತರಾ?' ಭೂಷಣನ ಪೊಲೀಸ್‌ಬುದ್ಧಿ ಜಾಗೃತವಾಯಿತು.

"ಹಂಸಿನಿಯನ್ನು ಬಿಟ್ಟು ಉಳಿದವರನ್ನು ಅರೆಸ್ಟ್ ಮಾಡಿ..."

ಅವನ ತಲೆಯಲ್ಲಿ ಗೇಂ ಥಿಯರಿಯ ಪ್ರಿಸನರ್ಸ್ ಡಿಲೆಮಾ ಸ್ಟ್ರಾಟಜಿ ವರ್ಕ್ ಆಗತೊಡಗಿತ್ತು. ನಂದಿನಿ, ಮಂಗಳಾ ಮತ್ತು ಅನಂತರಾಮಯ್ಯ ಕೊಂಚ ಗಲಿಬಿಲಿಗೊಂಡರು.

ಅವರತ್ತ ಹೋಗುತ್ತಿದ್ದಂತೆಯೇ ಭೂಷಣ್ ಹಂಸಿನಿಯ ಕಡೆ ನೋಡುತ್ತಾ, "ನೋಡು ಈ ಕೇಸ್‌ನಲ್ಲಿ ನೀನು ಕೇವಲ ಪಾತ್ರಧಾರಿ, ಅಷ್ಟೇ. ನೀನು ಕೋಆಪರೇಟ್ ಮಾಡಿದ್ರೆ, ನಿನ್ನನ್ನು ಸರ್ಕಾರಿ ಸಾಕ್ಷಿ ಅಂತ ಪರಿಗಣಿಸಿ ಶಿಕ್ಷೆ ಕಡಿಮೆ ಮಾಡಿಸುತ್ತೇನೆ. ಆಮೇಲೆ ಈ ಆಸ್ತಿ ಎಲ್ಲಾ ನಿನಗೇ. ನಮಗೆ ಈ ಆಸ್ತಿ ಯಾರಿಗೆ ಹೋಗುತ್ತೆ ಎಂಬುದನ್ನು ಕಟ್ಟಿಕೊಂಡು ಏನೂ ಆಗಬೇಕಿಲ್ಲ. ನಮಗೆ ಬೇಕಿರೋದು ನೀವು ಹೇಗೆ ಕೊಲೆ ಮಾಡಿದ್ರಿ, ಏನು ನಿಮ್ಮ ಪ್ಲಾನ್ ಏನು ಎಂಬುದು ಬೇಕು."

ಅತ್ತ ಅಮಿತಾ ನಂದಿನಿ ಬಳಿ, "ಹಂಸಿನಿ ತನ್ನ ತಪ್ಪೊಪ್ಪಿಗೆ ಕೊಟ್ಟರೆ ನೀವು ಗ್ಯಾರಂಟಿ ಒಳಕ್ಕೆ ಹೋಗುತ್ತೀರಾ... ನೀವೇ ಎಲ್ಲಾ ಹೇಳಿ ಒಪ್ಪಿಕೊಂಡರೆ ಎಲ್ಲರಿಗೂ ಶಿಕ್ಷೆ... ಅವಳೇನಾದ್ರೂ ನಿಮ್ಮ ವಿರುದ್ಧ ಸಾಕ್ಷಿ ಹೇಳಿದ್ರೆ, ಅವಳು ಬಚಾವ್, ನಿಮಗೆ ಹದಿನಾಲ್ಕು ವರ್ಷ ಜೈಲು..."

ಅನಂತರಾಮಯ್ಯ ಕೊಂಚ ಬೆದರಿದ ದನಿಯಲ್ಲಿ,